**3 ನೇ ಹೆಚ್ಚುವರಿ ಜಿಲ್ಲಾ ವ ಸತ್ರ ಹಾಗೂ ಸಿಬಿಐ/ಎಸಿಬಿ/ಲೋಕಾಯುಕ್ತ ಪ್ರಕರಣಗಳ ವಿಶೇಷ ನ್ಯಾಯಾಲಯ, ಧಾರವಾಡ ಇವರಲ್ಲಿ**

**ಎಸ್.ಸಿ. ನಂ.24/2025**

ಅ.ಸಾ.04

ಚಾ.ಸಾ. 15

ಸಾಕ್ಷಿದಾರರ ಹೆಸರು : ಮಹೇಶ ಶರವಾಡ

ತಂದೆಯ ಹೆಸರು : ಚನ್ನಪ್ಪ ಶರವಾಡ

ವಯಸ್ಸು : 26 ವರ್ಷಗಳು

ಉದ್ಯೋಗ : ವ್ಯಾಪಾರ

ವಾಸಸ್ಥಳ : ಮಿಶ್ರಿಕೋಟಿ

ಸಾಕ್ಷಿಗೆ ದಿನಾಂಕ : **21/04/2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ-1 ಅನ್ನು ತೋರಿಸಿದಾಗ ಅದರಲ್ಲಿ ತನ್ನ ಬರವಣಿಗೆ ಮತ್ತು ಸಹಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಸಹಿಯನ್ನು ನಿಪಿ-1 ಬಿ ಎಂದು ಗುರುತಿಸಲಾಯಿತು. ಪೋಲಿಸರು ಹೇಳಿದಂತೆ ನಿಪಿ-1 ರ ವಿಷಯವನ್ನು ನಾನು ಬರೆದಿದ್ದೆ. ನಮ್ಮ ಊರಿನ ಅನುಸೂಯ ಈಗ ತೀರಿಕೊಂಡಿದ್ದಾಳೆ. ಸದರಿ ಅನುಸೂಯ ಹೇಗೆ ಮೃತಪಟ್ಟಿರುತ್ತಾಳೆ ನನಗೆ ಗೊತ್ತಿಲ್ಲ. ಅನುಸೂಯಳ ಸಾವಿಗೆ

ಹಾಗೂ ಆರೋಪಿತರಿಗೆ ಯಾವುದೇ ಸಂಬಂಧ ಇಲ್ಲ. ಪೊಲೀಸರು ನನಗೆ ಠಾಣೆಗೆ ಕರೆಸಿರಲಿಲ್ಲ ಯಾವುದೇ ಹೇಳಿಕೆಯನ್ನು ಪಡೆದಿರಲಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ವಿನಂತಿಸುತ್ತಾರೆ. ಸಾಕ್ಷಿ ಹೇಳಿದ ಈ ಮೇಲಿನ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳನ್ನು ಪರಿಶೀಲಿಸಿದಾಗ ಸಾಕ್ಷಿಯ ಸಾಕ್ಷ್ಯ ಮತ್ತು ಹೇಳಿಕೆ ಅಂಶಗಳಿಗೆ ವ್ಯತಿರಿಕ್ತ ಇದ್ದ ಕಾರಣ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರಿಂದ**

2. ನಾನು ಚಾಸಾ–1 ರವರು ಹೇಳಿದಂತೆ ನಿಪಿ–1 ದೂರನ್ನು ನನ್ನ ಬರವಣಿಗೆಯಲ್ಲಿ ಬರೆದಿದ್ದೆ ಎಂದರೆ ಸರಿಯಲ್ಲ. ನಾನು ಘಟನೆಯ ಕುರಿತು ಚಾಸಾ–1 ರವರಿಂದ ಕೇಳಿ ತಿಳಿದುಕೊಂಡು ಈಗ ಓದಿ ಹೇಳಿದ ನಿಪಿ–11 ರಂತೆ ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಈಗ ಚಾಸಾ–01 ಮತ್ತು 09 ಹಾಗೂ ಆರೋಪಿತರು ರಾಜಿ ಮಾಡಿಕೊಂ ಡಿರುತ್ತಾರೆ. ಅವರು ರಾಜಿ ಮಾಡಿಕೊಂಡಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿ ಪರ ಶ್ರೀ ಜಿ ಸಿ ಬಿ ವಕೀಲರಿಂದಃ**

**ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆಃ ಇಲ್ಲ.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಅದೆ.

**(ಶ್ರೀಮತಿ ಜರೀನಾ)**

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಹಾಗೂ ವಿಶೇಷ ನ್ಯಾಯಾಧೀಶರು ಸಿ.ಬಿ.ಐ./ಎ.ಸಿ.ಬಿ.,

ಲೋಕಾಯುಕ್ತ, ಧಾರವಾಡ.